ವಿಜಯ ಕರ್ನಾಟಕ

**Monday, December 27th, 2010**

# ಎಂ.ಎಸ್ ಎಂಜಿನಿಯರಿಂಗ್ ಕೋರ್ಸ್

ವಿವಿಧ ಕ್ಷೇತ್ರಗಳಲ್ಲಿ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರನ್ನೂ ಗಮನದಲ್ಲಿಟ್ಟುಕೊಂಡೇ ಜೈನ್ ಯೂನಿವರ್ಸಿಟಿಯು ಸಂಜೆ ಕಾಲೇಜು ಆರಂಭಿಸಿದೆ. ಈ ಕಾಲೇಜಿನಲ್ಲಿ ಎಂ.ಎಸ್ (ಎಂಜಿನಿಯರಿಂಗ್) ಕೋರ್ಸ್ ಆರಂಭಿಸಲಾಗಿದೆ. ಎಂ.ಎಸ್ ಕೋರ್ಸ್ ಮಾಡುವ ಆಸೆಯಿದ್ದರೂ ಅನಿವಾರ್ಯ ಕಾರಣಗಳಿಂದ ಉನ್ನತ ಅಧ್ಯಯನಕ್ಕೆ ಮನಸ್ಸು ಮಾಡದೆ ನೌಕರಿ ಹಿಡಿದಿದ್ದವರಿಗೆಂದೇ ಈ ಕೋರ್ಸ್ ಆರಂಭಿಸಲಾಗಿದೆ ಎಂದು ಜೈನ್ ಯೂನಿವರ್ಸಿಟಿಯ ಪ್ರಕಟಣೆ ತಿಳಿಸಿದೆ.

ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಲು ಜನವರಿ 10 ಕಡೆಯ ದಿನ. ಕೋರ್ಸ್‌ಗಳು ಹಾಗೂ ಪ್ರವೇಶ ಶುಲ್ಕದ ವಿವರಗಳಿಗೆ ಜೈನ್ ಯೂನಿವರ್ಸಿಟಿಯನ್ನು ಸಂಪರ್ಕಿಸಬಹುದು.